REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

# ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 35 । 3 ಡಿಸೆಂಬರ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

### ಲಕ್ಷ್ಮೀ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ ಮೊದಲ ಮಹಡಿ, ನವೀಕೃತ ಕಚೇರಿ ಉದ್ಘಾಟನೆ

## ಸಣ್ಣ ವ್ಯಾಪಾರಿಗಳಿಗೆ ಸಹಕಾರಿ ಬ್ಯಾಂಕುಗಳು ಆಧಾರಸ್ತಂಭ : ಎಚ್.ಕೆ. ಪಾಟೀಲ




**ಗಜೇಂದ್ರಗಡ :** 'ಲಕ್ಷ್ಮೀ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಬಹು ಶಿಸ್ತಿನಿಂದ ಬೆಳೆದು ನಾಡಿನ ಎಲ್ಲ ಆರ್ಥಿಕ ಸಂಸ್ಥೆಗಳಿಗೂ ಮಾದರಿಯಾಗಿದೆ. ಈ ಬ್ಯಾಂಕ್ ಮಹಿಳೆಯರನ್ನು ಸ್ವಾವಲಂಬಿಯಾಗಿಸಿದೆ. ಸಹಕಾರಿ ಬ್ಯಾಂಕ್‌ಗಳು ಸಣ್ಣ ವ್ಯಾಪಾರಸ್ಥರಿಗೆ ಆಧಾರವಾಗಿವೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಪ್ರವಾಸೋದ್ಯಮ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ. ಪಾಟೀಲ ಹೇಳಿದರು.

ಇತ್ತೀಚೆಗೆ ಭಾನುವಾರ ಪಟ್ಟಣದ ಸರಾಫ ಬಜಾರಿನಲ್ಲಿರುವ ದಿ. ಲಕ್ಷ್ಮೀ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಮೊದಲ ಮಹಡಿಯ ಉದ್ಘಾಟನೆ ನೆರವೇರಿಸಿದ ಅವರು ಬಳಿಕ ಜಗದ್ಗುರು ತೋಂಟದಾರ್ಯ ಸಿಬಿಎಸ್‌ಇ ಶಾಲೆಯ ಸಭಾ ಭವನದಲ್ಲಿ ಹಮ್ಮಿಕೊಂಡಿದ್ದ ಉದ್ಘಾಟನೆ ಹಾಗೂ ಬ್ಯಾಂಕಿನ ಹಿರಿಯ ಸದಸ್ಯರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ಗ್ರಾಹಕ ಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿರುವ ಲಕ್ಷ್ಮೀ ಅರ್ಬನ್ ಬ್ಯಾಂಕ್ ಜನರ ಪ್ರೀತಿ ವಿಶ್ವಾಸದಿಂದ 113 ವರ್ಷ ಪೂರೈಸಿದೆ. ಈ ಬ್ಯಾಂಕಿನ ಮೇಲೆ ವಿಶ್ವಾಸ ಇಟ್ಟು ಗ್ರಾಹಕರು 58 ಕೋಟಿ ರೂ. ಠೇವಣಿ ಇಟ್ಟಿದ್ದಾರೆ. ಇನ್ನೊಂದು ವರ್ಷದಲ್ಲಿ ಬ್ಯಾಂಕಿನ ವ್ಯವಹಾರ 100 ಕೋಟಿ ರೂ. ದಾಟಲಿ ಎಂದು ಆಶಿಸಿದರು.

15 ವರ್ಷದೊಳಗೆ ಯಾವುದೇ ಕಟಬಾಕಿ ಇಲ್ಲದ ನಾಡಿನ ಹೆಸರಾಂತ ಬ್ಯಾಂಕ್ ಇದಾಗಿ ಹಲವು ಪ್ರಶಸ್ತಿ ಗಳಿಸಿದೆ. ಜನರ ವಿಶ್ವಾಸ ಸಂಪಾದಿಸಿದೆ. ಜನರ ಪ್ರೀತಿ ವಿಶ್ವಾಸದಿಂದ ಪ್ರಸಕ್ತ ಸಾಲಿನಲ್ಲಿ 1 ಕೋಟಿ ರೂ. ಲಾಭ ಗಳಿಸಿದೆ. ಇಂತಹ ನಂಬಿಗಸ್ಥ ಬ್ಯಾಂಕುಗಳನ್ನು ರಿಸರ್ವ್ ಬ್ಯಾಂಕ್ ಮುಚ್ಚುವ ಪ್ರಯತ್ನ ಮಾಡುತ್ತಿವೆ ಎಂದು ದೂರಿದರು.

ಶಾಸಕ ಶ್ರೀ ಜಿ.ಎಸ್. ಪಾಟೀಲ ಮಾತನಾಡಿ, ಬ್ಯಾಂಕಿನ ಬೆಳವಣಿಗೆಗೆ ಸಾಕಷ್ಟು ಮಹನೀಯರು ಶ್ರಮಿಸಿದ್ದಾರೆ. ಬ್ಯಾಂಕಿನ ಆಡಳಿತ ಮಂಡಳಿ ಅತ್ಯಂತ ಶಿಸ್ತು, ಶ್ರದ್ಧೆಯಿಂದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ರಾಷ್ಟ್ರೀಕೃತ ಬ್ಯಾಂಕ್‌ಗಳಿಗಿಂತ ಸಹಕಾರಿ ಬ್ಯಾಂಕುಗಳು ವಿಶ್ವಾಸಾರ್ಹ ಕಾರ್ಯ ಮಾಡುತ್ತಿವೆ. ಬ್ಯಾಂಕುಗಳು ಉಳಿಯಲು ಠೇವಣಿದಾರರ ಹಿತಾಸಕ್ತಿ ಕಾಪಾಡಬೇಕು ಎಂದರು.

ಈ ಬ್ಯಾಂಕ್ ತಮಗೆ ಬರುವ ಲಾಭಾಂಶದಲ್ಲಿ ಪ್ರತಿಭಾ ಪುರಸ್ಕಾರ, ಶುದ್ಧ ಕುಡಿಯುವ ನೀರಿನ ಯಂತ್ರಗಳ ವಿತರಣೆ, ಸರ್ಕಾರಿ ಶಾಲೆಗಳಿಗೆ, ಪೀಠೋಪಕರಣಗಳ ವಿತರಣೆ, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಸೇರಿದಂತೆ ಜನಪರ ಕಾರ್ಯ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಬ್ಯಾಂಕಿನ ಸದಸ್ಯರ ಪೈಕಿ ಆರ್ಥಿಕವಾಗಿ ಹಿಂದುಳಿದ ಒಬ್ಬ ವಿದ್ಯಾರ್ಥಿಗೆ ಲ್ಯಾಪ್‌ಟಾಪ್, ಎಂಬಿಬಿಎಸ್ ವಿದ್ಯಾರ್ಥಿಗೆ 25 ಸಾವಿರ ಆರ್ಥಿಕ ನೆರವು, 10 ಮಹಿಳೆಯರಿಗೆ ಸಬಲೀಕರಣಕ್ಕಾಗಿ ತಲಾ 50 ಸಾವಿರ ಪ್ರೋತ್ಸಾಹಧನದ ಚೆಕ್ ವಿತರಿಸಲಾಯಿತು. 120ಕ್ಕೂ ಅಧಿಕ ಬ್ಯಾಂಕಿನ ಹಿರಿಯ ಸದಸ್ಯರಿಗೆ ಸನ್ಮಾನಿಸಲಾಯಿತು. ಸಹಕಾರ ಸಂಘಗಳ ಉಪನಿಬಂಧಕ ಶ್ರೀಮತಿ ಎಸ್.ಎಸ್. ಕಬಾಡೆ, ಸಹಕಾರ ಸಂಘಗಳ ಸಹಾಯಕ ನಿಬಂಧಕ ಶ್ರೀಮತಿ ಪುಷ್ಪಾ ಕಡಿವಾಳ, ಬ್ಯಾಂಕಿನ ಅಧ್ಯಕ್ಷ ಶ್ರೀ ಎಸ್.ಕೆ. ಚನ್ನಿ, ವೈಸ್ ಚೇರ್ಮನ್ ಶ್ರೀ ಸಿದ್ದಣ್ಣ ಬಂಡಿ, ನಿರ್ದೇಶಕರುಗಳಾದ ಶ್ರೀ ಎಸ್.ಎಸ್.ಪಟ್ಟೇದ, ಶ್ರೀ ಪಿ.ಎಸ್. ಕಡ್ಡಿ, ಶ್ರೀ ಪಿ.ಬಿ. ಮ್ಯಾಗೇರಿ, ಶ್ರೀ ವ್ಹಿ.ಎಸ್. ನಂದಿಹಾಳ, ಶ್ರೀ ಬಿ.ವ್ಹಿ. ಕಂಬಳ್ಯಾಳ, ಶ್ರೀ ಪಿ.ವಾಯ್. ತಳವಾರ, ಶ್ರೀ ಎಸ್.ಕೆ. ಕನಕೇರಿ, ಶ್ರೀಮತಿ ಆರ್.ಪಿ. ಹೂಲಿ, ಶ್ರೀಮತಿ ಎಸ್.ಯು. ಮೆಣಸಗಿ, ಶ್ರೀ ಆರ್.ಬಿ. ನಿಡಗುಂದಿ, ಶ್ರೀ ಕೆ.ಎಸ್. ಸಜ್ಜನರ, ಶ್ರೀ ಆರ್.ವಾಯ್. ಮರಿಯಣ್ಣವರ, ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೊಸಂಗಡಿ, ಸಿಬ್ಬಂದಿ ಶ್ರೀ ಪ್ರದೀಪ ಮ್ಯಾಗೇರಿ, ಶ್ರೀ ಎಂ.ಎಸ್. ಇಂಡಿ, ಶ್ರೀ ವಿ.ಪಿ. ಜಡಿಮಠ, ಶ್ರೀ ವಿಶ್ವನಾಥ ಕರಬಾಶೆಟ್ರ, ಶ್ರೀ ವಿ.ಡಿ. ಕೆಂಭಾವಿ, ಶ್ರೀಮತಿ ವಿಜಯಲಕ್ಷ್ಮೀ ಆಲೂರ, ಶ್ರೀ ಶರಣಪ್ಪ ರಂಜಣಗಿ, ಶ್ರೀ ಎಸ್.ವಿ. ಕೋಟಿ, ಇತರರಿದ್ದರು.

ಜಿಡಿಪಿ ಪ್ರಗತಿ : ಭಾರತ ದಾಖಲೆ ಹಣಕಾಸು ವರ್ಷದ ಮೊದಲಾರ್ಧದಲ್ಲೇ ಗುರಿ ಮೀರಿ ಸಾಧನೆ 2

ದಿ ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಅ., 4

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ 7

## ಸಂಪಾದಕೀಯ



## ಆತ್ಮೀಯ ಸಹಕಾರಿಗಳೇ...

### ಸಹಕಾರ ಜನರೊಂದಿಗೆ ಬೆರೆತು ಅವರ ಆರ್ಥಿಕಾಭಿವೃದ್ಧಿಗೆ ನೆರವು ನೀಡುವುದರೊಂದಿಗೆ ದೇಶದ ಆರ್ಥಿಕಾಭಿವೃದ್ಧಿಗೆ ಕೊಡುಗೆ ನೀಡುತ್ತಿವೆ

ಸಾಂಸ್ಕೃತಿಕವಾಗಿ ಶ್ರೀಮಂತ ಜಿಲ್ಲೆಯಾದ ಹಾವೇರಿ ನಾನು ಭೇಟಿ ಕೊಡಲು ತುಂಬಾ ಇಷ್ಟ ಪಡುವ ಊರಾಗಿದೆ. ಇದಕ್ಕೆ ಕಾರಣ, ಈ ಜಿಲ್ಲೆಯಲ್ಲಿ ಸಂತ ಶಿಶುನಾಳ ಶರೀಫರು, ಕನಕದಾಸರು, ಸರ್ವಜ್ಞ, ಹಾನಗಲ್ ಕುಮಾರ ಶಿವಯೋಗಿಗಳು, ಸಾಹಿತಿ ಗಳಗನಾಥರು, ಗಾನಯೋಗಿ ಪಂಚಾಕ್ಷರಿ ಗವಾಯಿಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ವಿನಾಯಕ ಕೃಷ್ಣ ಗೋಕಾಕರು ಮುಂತಾದ ಮಹನೀಯರುಗಳಿಗೆ ಜನ್ಮನೀಡಿದ ಹೆಮ್ಮೆಯ ನಾಡಾಗಿದ್ದು, ಇಲ್ಲಿ ನಡೆದ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದ್ದು ನನಗೆ ಹೆಮ್ಮೆ ಎನಿಸಿತು.

ಇಂದು ನಮ್ಮ ದೇಶದಲ್ಲಿ ಆಡಳಿತ ನಡೆಸುವ ಸರಕಾರಗಳಿಗಿಂತಲೂ ಸಹಕಾರ ಸಂಘ–ಸಂಸ್ಥೆಗಳು ಜನರೊಂದಿಗೆ ಬೆರೆತು, ಅವರ ಆರ್ಥಿಕಾಭಿವೃದ್ಧಿಗೆ ನೆರವು ನೀಡುವುದರ ಮೂಲಕ ಅವೂ ಬೆಳೆಯುತ್ತಿವೆ. ಮುಂಬರುವ ದಿನಗಳಲ್ಲಿ ನಮ್ಮ ಸಹಕಾರ ಕ್ಷೇತ್ರ ಮತ್ತಷ್ಟು ಪ್ರಗತಿ ಸಾಧಿಸಲಿವೆ ಹಾಗೂ ದೇಶದ ಜನರನ್ನು ಆರ್ಥಿಕವಾಗಿ ಚೈತನ್ಯಗೊಳಿಸಲಿದೆ ಎಂದು ನಾನು ಭಾವಿಸುತ್ತೇನೆ.

ಮುಖ್ಯವಾಗಿ, ನಮ್ಮ ಸಹಕಾರ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವ ನೀತಿ ನಿಯಮವನ್ನು ಪಾಲಿಸುವ ಅತ್ಯುತ್ತಮ ಸಂಪ್ರದಾಯ ಇರುವುದನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸಹಕಾರ ಸಂಘ–ಸಂಸ್ಥೆಗಳನ್ನು ಸಹಕಾರದ ಮೂಲ ಉದ್ದೇಶಗಳನ್ನು ಮಾದರಿಯಾಗಿ ಇಟ್ಟುಕೊಂಡು ಬೆಳೆಸಬೇಕಿದೆ. ಅಲ್ಲದೆ, ಯಾರೂ ಕೂಡ ವೈಯಕ್ತಿಕ ಹಿತಾಸಕ್ತಿ ಇಟ್ಟುಕೊಂಡು ಈ ಸಹಕಾರ ಕ್ಷೇತ್ರಕ್ಕೆ ಬರಬಾರದು. ಸಾರ್ವಜನಿಕ ಹಿತಾಸಕ್ತಿ ಇಟ್ಟುಕೊಂಡುಬಂದಲ್ಲಿ, ಸಹಕಾರ ಸಂಘ–ಸಂಸ್ಥೆಗಳು ಸ್ವಾಭಿಮಾನದಿಂದ ಬೃಹತಾಗಿ ಬೆಳೆಯುತ್ತವೆ, ಹಲವು ವರ್ಷಗಳ ಕಾಲ ಬೆಳಗುತ್ತವೆ.

ಆತ್ಮನಿರ್ಭರ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು ಎಂಬುದು ಈ ವರ್ಷದ ಸಪ್ತಾಹದ ಧ್ಯೇಯವಾಗಿದೆ. ಅಂದರೆ ದೇಶ ಆತ್ಮನಿರ್ಭರವಾಗಬೇಕಿದ್ದರೆ, ಸಹಕಾರಿ ಚಳವಳಿಯ ಮೂಲಕ ಸಾಧ್ಯ ಎನ್ನುವ ಅರಿವು ಆಡಳಿತ ನಡೆಸುವವರಲ್ಲಿ ಮೂಡಿರುವುದು ಸಂತೋಷದ ಸಂಗತಿಯಾಗಿದೆ. ದೇಶದ ಆರ್ಥಿಕಾಭಿವೃದ್ಧಿಗೆ ಸಹಕಾರ ಕ್ಷೇತ್ರದ ಕೊಡುಗೆ ಬಹಳ ಮುಖ್ಯವಾಗಿದೆ. ಇಂದು ಸಹಕಾರ ಕ್ಷೇತ್ರದಡಿಯಲ್ಲಿ ಸಹಕಾರಿ, ಜವಳಿ, ಆಹಾರ ಸಂಸ್ಕರಣ, ಹೈನುಗಾರಿಕೆ, ನೇಕಾರಿಕೆ, ಮೀನುಗಾರಿಕೆ ಇನ್ನೂ ಹಲವು ವಲಯಗಳು ಉತ್ತಮವಾಗಿ ಕಾರ್ಯಚಟುವಟಿಕೆ ನಡೆಸುತ್ತಿದ್ದು, ಜನರ ಜೀವನಾಡಿಯಾಗಿ ಕಾರ್ಯ ನಿರ್ವಹಿಸುತ್ತಿವೆ.

ರಾಜ್ಯದಲ್ಲಿ ಇಂದು ದಿನಕ್ಕೆ ಕೋಟಿ ಲೀಟರ್‌ಗಳಗೂ ಹೆಚ್ಚು ಹಾಲು ಉತ್ಪಾದನೆಯಾಗುತ್ತಿದ್ದು, ಗ್ರಾಮೀಣ ಮಹಿಳೆಯರಿಗೆ ಆರ್ಥಿಕವಾಗಿ ಅನುಕೂಲವಾಗಿದೆ. ರಾಜ್ಯದ 250 ಪಟ್ಟಣ ಸಹಕಾರ ಬ್ಯಾಂಕುಗಳ ಮೂಲಕ ರೂ. 45 ಸಾವಿರ ಕೋಟಿ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತಿದ್ದು ಕೃಷಿಕರ, ಶ್ರಮಿಕ ಹಾಗೂ ಮಧ್ಯಮ ವರ್ಗದ ಜನರು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಬೆಳೆಯಲು ಸಾಧ್ಯವಾಗಿದೆ.

ಇದು ಸಹಕಾರ ಸಂಸ್ಥೆಗಳು ರೈತರ, ಆರ್ಥಿಕ ದುರ್ಬಲರ, ಮಹಿಳೆಯರ ಪರವಾಗಿ ಸೇವೆ ಸಲ್ಲಿಸುತ್ತಿರುವುದನ್ನು ತೋರಿಸುತ್ತದೆ. ಅವರುಗಳ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಗೆ ಸಹಕಾರ ಸಂಸ್ಥೆಗಳು ಕಾರಣವಾಗಿರುವುದನ್ನು ತೋರಿಸುತ್ತದೆ. ಪಂಡಿತ್ ಜವಾಹರಲಾಲ್ ನೆಹರೂ ಅವರು ಸಹಕಾರ ಕ್ಷೇತ್ರಕ್ಕೆ ಪಂಚವಾರ್ಷಿಕ ಯೋಜನೆಗಳ ಮೂಲಕ ವಿಶೇಷ ಒತ್ತನ್ನು ನೀಡಿದ್ದರಿಂದಲೇ ಇದೆಲ್ಲವು ಇಂದು ಸಾಧ್ಯವಾಗಿದೆ ಎಂದು ನಾನು ಭಾವಿಸುತ್ತೇನೆ.

▸▸ ಎಚ್.ಕೆ. ಪಾಟೀಲ

## ಜಿಡಿಪಿ ಪ್ರಗತಿ : ಭಾರತ ದಾಖಲೆ ಹಣಕಾಸು ವರ್ಷದ ಮೊದಲಾರ್ಧದಲ್ಲೇ ಗುರಿ ಮೀರಿ ಸಾಧನೆ




**ನವದೆಹಲಿ** : ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕಡಿತದಿಂದ ಆರ್ಥಿಕ ಚಟುವಟಿಕೆಗಳು ಚುರುಕುಗೊಂಡಿದ್ದು, ಇದರಿಂದ ದೇಶದ ಒಟ್ಟಾರೆ ಆಂತರಿಕ ಉತ್ಪನ್ನವು (ಜಿಡಿಪಿ) ಪ್ರಸಕ್ತ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕದಲ್ಲಿ (ಜುಲೈ–ಸೆಪ್ಟೆಂಬರ್) ದಾಖಲೆ ಪ್ರಮಾಣದಲ್ಲಿ ಶೇ.8.2ಕ್ಕೆ ಏರಿಕೆಯಾಗಿದೆ.

ಎರಡನೆಯ ತ್ರೈಮಾಸಿಕದ ಜಿಡಿಪಿ ದರವು ಕಳೆದ ಆರು ತ್ರೈಮಾಸಿಕಗಳಲ್ಲೇ ಗರಿಷ್ಠ ಮಟ್ಟದ್ದಾಗಿದೆ. ನಿರೀಕ್ಷೆಗೂ ಮೀರಿದ ಪ್ರಗತಿಯ ಮೂಲಕ ಭಾರತವು, ವಿಶ್ವದಲ್ಲೇ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂಬ ಸ್ಥಾನವನ್ನು ಉಳಿಸಿಕೊಂಡಿದೆ. ಚೀನಾವು ಎರಡನೆಯ ತ್ರೈಮಾಸಿಕದಲ್ಲಿ ಶೇ.4.8ರಷ್ಟು ಜಿಡಿಪಿ ಪ್ರಗತಿ ದಾಖಲಿಸಿದೆ. ರಾಷ್ಟ್ರೀಯ ಅಂಕಿ ಅಂಶಗಳ ಇಲಾಖೆ ಬಿಡುಗಡೆ ಮಾಡಿರುವ ಅಂಕಿ ಅಂಶದಂತೆ, ವಾರ್ಷಿಕ ಗುರಿಯನ್ನು ಮೀರಿ, ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳಲ್ಲಿಯೇ ಜಿಡಿಪಿ ಶೇ.8ರ ಗಡಿ ದಾಟಿದೆ. ಇದಕ್ಕೂ ಮುನ್ನ 2023–24ನೇ ಸಾಲಿನ ನಾಲ್ಕನೆಯ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ಭಾರತವು 8.4ರಷ್ಟು ಜಿಡಿಪಿ ಪ್ರಗತಿ ದಾಖಲಾಗಿತ್ತು.

### ಜಿಡಿಪಿ : ಹೊಸ ದಾಖಲೆ ನಿರೀಕ್ಷೆ

ಜನವರಿಯಲ್ಲಿ ನಡೆದ ಆರ್ಥಿಕ ಸಮೀಕ್ಷೆಯಲ್ಲಿ ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ.6.3 ರಿಂದ 6.8ರ ನಡುವೆ ಇರಲಿದೆ ಎಂದು ಅಂದಾಜು ಮಾಡಲಾಗಿತ್ತು. ಆದರೆ, ಆರ್ಥಿಕ ವರ್ಷದ ಮೊದಲಾರ್ಧದಲ್ಲೇ ಇದು ಶೇ.8ರ ಗಡಿ ದಾಟಿದೆ. ಹೀಗಾಗಿ ಹಣಕಾಸು ವರ್ಷದ ಅಂತ್ಯಕ್ಕೆ ಗುರಿ ಮೀರಿ ಜಿಡಿಪಿ ದಾಖಲಾಗುವ ನಿರೀಕ್ಷೆ ಇದೆ. ಭಾರತೀಯ ರಿಸರ್ವ್ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ.6.8ರಷ್ಟು ಜಿಡಿಪಿ ಅಂದಾಜು ಮಾಡಿದೆ.

# ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಕರ್ನಾಟಕ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು / ನಿರ್ದೇಶಕರುಗಳು


ಟಿ.ಕೆ. ನಂಜುಂಡಪ್ಪ


ಹೆಚ್.ಸಿ. ಗೋಪಾಲ್


ಕೆ.ಎನ್. ಗೋವಿಂದರಾಜು


ಯು. ವೆಂಕಟೇಶ್


ಮಂಜುನಾಥಗೌಡ ಎಸ್. ಮುರಳ್ಳಿ


ಗೋಸಲ ಭರಮಪ್ಪ

**ಬೆಂಗಳೂರು** : ತುಮಕೂರು ಸಿದ್ದಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಟಿ.ಕೆ. ನಂಜುಂಡಪ್ಪ, ಬೆಂಗಳೂರು ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್.ಸಿ.ಗೋಪಾಲ್, ತುಮಕೂರು ವೈಶ್ಯ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್. ಗೋವಿಂದರಾಜು, ಬಳ್ಳಾರಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಯು. ವೆಂಕಟೇಶ್, ಕಲಘಟಗಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಮಂಜುನಾಥಗೌಡ ಶಂಕರಗೌಡ ಮುರಳ್ಳಿ, ಹೊಸಪೇಟೆ ಕೋ-ಆಪರೇಟಿವ್ ಸಿಟಿ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಶ್ರೀ ಗೋಸಲ ಭರಮಪ್ಪ, ರವರುಗಳಿಗೆ 72ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ 2025ನೇ ಸಾಲಿನ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು ಹಾಗೂ ಮಹಾಮಂಡಳದ ನಿರ್ದೇಶಕ ಮಂಡಳಿ ಸದಸ್ಯರು, ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿರುತ್ತಾರೆ.

# ಮೈಸೂರಿನ ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ದಿನಾಚರಣೆ



**ಮೈಸೂರು** : ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕಿನ ವತಿಯಿಂದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ದಿನಾಚರಣೆ ಅಂಗವಾಗಿ ಬ್ಯಾಂಕಿನ ಅಧ್ಯಕ್ಷರಾದ ಡಾ. ಮಂಜೇಗೌಡ ಎಂ.ಬಿ., ರವರು ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸದಸ್ಯರು, ಠೇವಣಿದಾರರು, ಬ್ಯಾಂಕಿನ ಸಿಬ್ಬಂದಿ ಹಾಗೂ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು. ತಮ್ಮ ಭಾಷಣದಲ್ಲಿ ಅವರು ಸಹಕಾರಿ ಚಳುವಳಿಯ ಮಹತ್ವ, ಸಾಮಾನ್ಯ ಜನರ ಆರ್ಥಿಕ ಬಲವರ್ಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರವನ್ನು ವಿವರಿಸಿದರು.

ಬ್ಯಾಂಕಿನ ಮೇಲಿರುವ ಗ್ರಾಹಕರ ವಿಶ್ವಾಸ ಮತ್ತು ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಅವರು ಮೆಚ್ಚಿ ಅಭಿನಂದಿಸಿದರು.

ಬ್ಯಾಂಕ್ ತನ್ನ ಗ್ರಾಹಕ ಸ್ನೇಹಿ ಸೇವೆಗಳನ್ನು ಮುಂದುವರೆಯುವುದರ ಜೊತೆಗೆ ಸಮಾಜದ ಆರ್ಥಿಕ ಅಭಿವೃದ್ಧಿಗೆ ಬದ್ಧವಾಗಿರುವುದನ್ನು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಡಾ. ಆನಂದ ಎಸ್. ರವರು ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಯೋಗಾನಂದ ಎಂ.ಬಿ, ಶ್ರೀ ಮುತ್ತುಕುಮಾರ್. ಎಸ್, ಶ್ರೀ ಚಂದ್ರಶೇಖರ. ಆರ್, ಶ್ರೀ ಯತಿರಾಜು. ಎಂ, ಶ್ರೀ ರಾಮನಾದನ್. ಸಿ, ಶ್ರೀ ಉತ್ತೇಜ್.ಎಸ್, ಶ್ರೀಮತಿ ಶ್ವೇತಾ.ಎಸ್, ಶ್ರೀಮತಿ ನಿರ್ಮಲ.ಸಿ, ಶ್ರೀ ಚಂದ್ರಶೇಖರ್.ಪಿ, ಶ್ರೀ ನಂದಕುಮಾರ್.ಎನ್.ಎಸ್ ರವರುಗಳು ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ನಾರಾಯಣ ಎಸ್.ಜೆ, ಜನರಲ್ ಮ್ಯಾನೇಜರ್‌ರವರಾದ ಶ್ರೀ ಲಕ್ಷ್ಮೀಪ್ರಸಾದ್ ಎಂ ಸಿ ಮತ್ತು ಸತ್ಯನಾರಾಯಣ ಹೆಚ್.ಸಿ, ಸದಸ್ಯರು, ಠೇವಣಿದಾರರು ಹಾಗೂ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ದಿ ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.,








ದಿ ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಶಿವಮೊಗ್ಗ ಇದರ 62ನೇ ಸ್ಥಾಪಕರ ದಿನಾಚರಣೆಯನ್ನು ದಿನಾಂಕ : 24–11–2025 ರಂದು ಆಚರಿಸಲಾಯಿತು. ಹಿರಿಯ ಅಡಿಕೆ ವರ್ತಕರು / ಬ್ಯಾಂಕಿನ ಮಾಜಿ ನಿರ್ದೇಶಕರಾದ ಶ್ರೀ ಹೆಚ್.ಎಸ್. ಸುಮಿತ್ರವರು ಮುಖ್ಯ ಅತಿಥಿಯಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಹಿರಿಯ ಅಡಿಕೆ ವರ್ತಕರು / ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಶ್ರೀ ಬಿ.ಟಿ. ಶ್ರೀನಿವಾಸರವರನ್ನು ಸನ್ಮಾನಿಸಲಾಯಿತು.

ಸ್ಥಾಪಕ ದಿನದ ಅರ್ಥಪೂರ್ಣ ಆಚರಣೆ ನಿಟ್ಟಿನಲ್ಲಿ, ಸದಸ್ಯರು / ಗ್ರಾಹಕರಿಗೆ ರೋಟರಿ ಬ್ಲಡ್ ಸೆಂಟರ್ ಸಹಯೋಗದೊಂದಿಗೆ ರಕ್ತ ದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಒಟ್ಟು 88 ದಾನಿಗಳು ರಕ್ತ ದಾನವನ್ನು ಮಾಡಿದರು. ಜೊತೆಯಲ್ಲಿ ಉಚಿತವಾಗಿ ಶಂಕರ ಐ ಹಾಸ್ಪಿಟಲ್ ಸಹಯೋಗದೊಂದಿಗೆ ಕಣ್ಣು ತಪಾಸಣಾ ಶಿಬಿರವನ್ನು ಸಹ ಆಯೋಜಿಸಲಾಗಿತ್ತು. ಇದೇ ಸಂದಭದಲ್ಲಿ ಬ್ಯಾಂಕಿನ ವೆಬ್ ಸೈಟ್ www.sammco.bank.in ನ್ನು ಸಹ ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಯು.ಎಸ್. ಪ್ರೀತಮ್, ಉಪಾಧ್ಯಕ್ಷರಾದ ಶ್ರೀ ಡಿ.ಎಂ. ಹರೀಶ್ ಮತ್ತು ನಿರ್ದೇಶಕರು ಹಾಗೂ ಬ್ಯಾಂಕಿನ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಬೆಂಗಳೂರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು / ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ದಿನಾಂಕ : 05.12.2025ರಂದು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

ಆಧುನಿಕ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಹೊಸ ತಂತ್ರಜ್ಞಾನಗಳು ದಿನನಿತ್ಯ ಹೊರಬರುತ್ತಿದ್ದು, ಅದಕ್ಕೆ ಅನುಗುಣವಾಗಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಅವುಗಳನ್ನು ಅಳವಡಿಸಿಕೊಂಡು ತಮ್ಮ ಗ್ರಾಹಕರಿಗೆ ಉತ್ತಮ ಸೇವೆ ನೀಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ : 05.12.2025ರಂದು "Bharat Network Group" ಸಂಸ್ಥೆಯೊಂದಿಗೆ ಮಹಾಮಂಡಳವು ಬೆಂಗಳೂರಿನ "The Capitol Hotel" No-3, Raj Bhavan Rd, Vasanth Nagar, Bengaluru- 560001 ಇಲ್ಲಿ Tech-Drive Trust: Building the Future of Cooperative Banking ವಿಷಯಗಳ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿರುತ್ತದೆ.

ಸದರಿ ವಿಚಾರ ಸಂಕಿರಣದಲ್ಲಿ ಆಧುನಿಕ ಬ್ಯಾಂಕಿಂಗ್ ವಿಷಯಗಳ ಕುರಿತು ಉಪನ್ಯಾಸ ನೀಡಿ, ಚರ್ಚಿಸಲಾಗುವುದು. ಈ ಸದರಿ ವಿಚಾರ ಸಂಕಿರಣದಲ್ಲಿ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಆಯೋಜಿಸಲಾಗಿದ್ದು. ಒಂದು ಬ್ಯಾಂಕಿನಿಂದ ಗರಿಷ್ಠ ನಾಲ್ಕು ಪ್ರತಿನಿಧಿಗಳು ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಈ ವಿಚಾರ ಸಂಕಿರಣವನ್ನು ದಿನಾಂಕ : 05.12.2025ರಂದು ಬೆಳಿಗ್ಗೆ 08.30 ಗಂಟೆಗೆ ಉಪಹಾರ ಮತ್ತು ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು. ಈ ವಿಚಾರ ಸಂಕಿರಣದಲ್ಲಿ ತಪ್ಪದೇ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ವಿನಂತಿಸಲಾಗಿದೆ.

## ಎಂಸಿಸಿ ಬ್ಯಾಂಕಿನ ಬೆಳ್ತಂಗಡಿ ಶಾಖೆಯ ವಾರ್ಷಿಕೋತ್ಸವ, 14ನೇ ಎಟಿಎಂ ಉದ್ಘಾಟನೆ



**ಮಂಗಳೂರು :** ಎಂಸಿಸಿ ಬ್ಯಾಂಕಿನ ಬೆಳ್ತಂಗಡಿ ಶಾಖೆಯ ವತಿಯಿಂದ 14ನೇ ಎಟಿಎಂ ಅನ್ನು ಶನಿವಾರ ಬೆಳ್ತಂಗಡಿ ಹೆದ್ದಾರಿಯ ಚರ್ಚ್ ರಸ್ತೆಯ ಬಳಿಯ ವೈಭವ್ ಆರ್ಕೇಡ್‌ನಲ್ಲಿ ಉದ್ಘಾಟಿಸಲಾಯಿತು.

ಗುರುವಾಯನಕೆರೆಯ ಎಕ್ಸೆಲ್ ಪದವಿಪೂರ್ವ ಕಾಲೇಜಿನ ಅಧ್ಯಕ್ಷರಾದ ಸುಮಂತ್ ಕುಮಾರ್ ಜೈನ್ ಉದ್ಘಾಟಿಸಿದರು. ಎಟಿಎಂ ಅನ್ನು ಬದ್ಯಾರ್‌ನ ಫಾ। ಎಲ್.ಎಂ.ಪಿಂಟೊ ಹೆಲ್ತ್ ಸೆಂಟರ್ ಚಾರಿಟೇಬಲ್ ಟ್ರಸ್ಟಿನ ಆಡಳಿತಾಧಿಕಾರಿ ವಂದನೀಯ ಫಾ। ರೋಶನ್ ಕ್ರಾಸ್ತ ಆಶೀರ್ವದಿಸಿದರು. ಹೊಸದಾಗಿ ಉದ್ಘಾಟನೆಗೊಂಡ ಎಟಿಎಂನಿಂದ ಮೊದಲ ನಗದು ಹಿಂಪಡೆಯುವಿಕೆಯನ್ನು ಉಜಿರೆಯ ಅನುಗ್ರಹ ಇಂಗ್ಲಿಷ್ ಮಾಧ್ಯಮ ಶಾಲೆಯ ಪ್ರಾಂಶುಪಾಲ ವಂದನೀಯ ಫಾ। ವಿಜಯ್ ಲೋಬೊ ನೆರವೇರಿಸಿದರು.

ಅಧ್ಯಕ್ಷತೆಯನ್ನು ಎಂಸಿಸಿ ಬ್ಯಾಂಕ್ ಅಧ್ಯಕ್ಷರಾದ ಸಹಕಾರ ರತ್ನ ಅನಿಲ್ ಲೋಬೋ ವಹಿಸಿದ್ದರು. ಹೋಲಿ ರೆಡಿಮರ್ ಅಂಗ್ಲಮಾಧ್ಯಮ ಶಾಲೆಯ ಪ್ರಾಂಶುಪಾಲರಾದ ವಂದನೀಯ ಫಾ। ಕ್ಲಿಫರ್ಡ್ ಪಿಂಟೊ ಅತಿಥಿಯಾಗಿದ್ದರು.

ಬ್ಯಾಂಕಿನ ನಿರ್ದೇಶಕ ವಿನ್ಸೆಂಟ್ ಲಸ್ರಾದೊ ಸ್ವಾಗತಿಸಿದರು. ನಿರ್ದೇಶಕರಾದ ಹೆರಾಲ್ಡ್ ಮೊಂತೇರೊ, ಜೆ.ಪಿ. ರೊಡ್ರಿಗಸ್, ಮಹಾಪ್ರಬಂಧಕ ಸುನಿಲ್ ಮಿನೇಜಸ್, ಉಪ ಪ್ರಧಾನ ವ್ಯವಸ್ಥಾಪಕ ರಾಜ್ ಮೆನೆಜಸ್, ಹಿರಿಯ ಪ್ರಬಂಧಕ ಡೆರಿಲ್ ಲಸ್ರಾದೊ, ಶಾಖಾ ವ್ಯವಸ್ಥಾಪಕ ಶರುನ್ ಪಿಂಟೊ, ಶಾಖಾ ವ್ಯವಸ್ಥಾಪಕರು, ಸಿಬ್ಬಂದಿ ಸದಸ್ಯರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಭಾಗವಹಿಸಿದ್ದರು. ಜೊವೆಲ್ ಫೆರ್ನಾಂಡಿಸ್ ನಿರೂಪಿಸಿ ವಂದಿಸಿದರು.

### 12ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೆ ನೋಂದಾಯಿಸಿಕೊಂಡ ಅಭ್ಯರ್ಥಿಗಳು ಕಾಂಟ್ಯಾಕ್ಟ್ ಕ್ಲಾಸ್‌ಗೆ (ಸಂಪರ್ಕ ತರಗತಿ) ಹಾಜರಾಗುವ ಕುರಿತು

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ಆರ್‌ಐಸಿಎಂ, ಬೆಂಗಳೂರು. ಈ ಸಂಸ್ಥೆಯ ಸಹಯೋಗದೊಂದಿಗೆ ಏರ್ಪಡಿಸಲಾಗಿದೆ. ಸದರಿ ಕೋರ್ಸ್‌ಗೆ ತಾವು ಅಭ್ಯರ್ಥಿಯಾಗಿ ಪ್ರವೇಶ ಪಡೆದಿರುತ್ತೀರಿ. ಈಗಾಗಲೇ ಪಠ್ಯಪುಸ್ತಕವನ್ನು ತಮಗೆ ಕಳುಹಿಸಿಕೊಡಲಾಗಿದ್ದು, ಬೆಂಗಳೂರು ವಿಭಾಗಕ್ಕೆ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ದಿನಾಂಕ : 25.12.2025 ರಿಂದ ದಿನಾಂಕ : 28.12.2025 ರವರೆಗೆ ಒಟ್ಟು ನಾಲ್ಕು ದಿನಗಳು ಬೆಳಿಗ್ಗೆ 09.30 ರಿಂದ ಸಾಯಂಕಾಲ 05.30 ಗಂಟೆಯವರೆಗೆ ಕಾಂಟ್ಯಾಕ್ಟ್ ಕ್ಲಾಸ್ (ಸಂಪರ್ಕ ತರಗತಿ)ಗಳು ಆರ್.ಐ.ಸಿ.ಎಂ. ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು – 560070 ಇಲ್ಲಿ ನಡೆಯಲಿವೆ.

ವಿಜಯಪುರ ವಿಭಾಗಕ್ಕೆ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ದಿನಾಂಕ : 25.12.2025 ರಿಂದ ದಿನಾಂಕ : 28.12.2025ರವರೆಗೆ ಒಟ್ಟು ನಾಲ್ಕು ದಿನಗಳು ಬೆಳಿಗ್ಗೆ 09.30 ರಿಂದ ಸಾಯಂಕಾಲ 05.30 ಗಂಟೆಯವರೆಗೆ ಕಾಂಟ್ಯಾಕ್ಟ್ ಕ್ಲಾಸ್ (ಸಂಪರ್ಕ ತರಗತಿ)ಗಳು ವಿಜಯಪುರ ಜಿಲ್ಲಾ ಸಹಕಾರ ಯೂನಿಯನ್, ಕೇಂದ್ರ ಬಸ್ ನಿಲ್ದಾಣದ ಮುಂಭಾಗ, ವಿಜಯಪುರ–586103, ಇಲ್ಲಿ ನಡೆಯಲಿದೆ. ತಾವು ಕಾಂಟ್ಯಾಕ್ಟ್ ಕ್ಲಾಸ್ (ಸಂಪರ್ಕ ತರಗತಿ)ಗೆ ಮೇಲೆ ತಿಳಿಸಿದ ದಿನಾಂಕಗಳಂದು ಕಡ್ಡಾಯವಾಗಿ ಹಾಜರಾಗತಕ್ಕದ್ದು, ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಎಚ್. ಕಿರೇಸೂರ (7411332655) ಮತ್ತು ಶ್ರೀ ಹೆಚ್.ಸಿ.ಶ್ರೀನಿವಾಸ್ (9110642779) ಇವರುಗಳನ್ನು ಸಂಪರ್ಕಿಸಬಹುದಾಗಿದೆ.

### ಪಟ್ಟಣ ಸಹಕಾರ ಬ್ಯಾಂಕುಗಳ ಗಮನಕ್ಕೆ

ಮಹಾಮಂಡಳವು "ವಾರಪತ್ರಿಕೆ" ಹಾಗೂ "ತ್ರೈಮಾಸಿಕ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆ" ಎಂಬ ಎರಡು ಪತ್ರಿಕೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಹಕಾರ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ ಹಾಗೂ ಇತರೆ ಉಪಯುಕ್ತ ಸುದ್ದಿ / ವಿಚಾರಗಳನ್ನು ಹಾಗೂ ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾವಣೆಗೊಳಪಡುವ ಸಹಕಾರಿ ಕಾನೂನು ವಿದ್ಯಮಾನಗಳ ಕುರಿತು ಪ್ರಶ್ನೋತ್ತರ, ವಿವಿಧ ಬ್ಯಾಂಕುಗಳ ಯಶೋಗಾಥೆ, ಪ್ರಗತಿ ಚಿತ್ರ, ಬ್ಯಾಂಕುಗಳಲ್ಲಿ ಜರುಗಿರುವ ವಿವಿಧ ಸಮಾರಂಭಗಳ ವಿವರಗಳನ್ನು ಪ್ರಕಟಿಸಲಾಗುತ್ತಿದೆ. ಪ್ರಯುಕ್ತ, ಬ್ಯಾಂಕಿಗೆ ಸಂಬಂಧಿಸಿದ ವರದಿಗಳನ್ನು ಕೂಡಲೇ ಮಹಾಮಂಡಳಕ್ಕೆ ಅಂಚೆ ಮೂಲಕ ಅಥವಾ ಇ-ಮೇಲ್ ವಿಳಾಸಕ್ಕೆ email: editorkubf1@gmail.com ಅಥವಾ kscubfed@gmail.comಗೆ ಕಳುಹಿಸಿಕೊಟ್ಟಲ್ಲಿ ಮಹಾಮಂಡಳದ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

## 72ನೇ ಅಖಿಲ ಭಾರತ ಸಹಕಾರ ಸಪ್ತಾಹ । ವಿದ್ಯಾರ್ಥಿಗಳಿಗಾಗಿ ಶೂನ್ಯ ಖಾತೆ ಅಭಿಯಾನ

# ಆರ್ಥಿಕ ಸುಸ್ಥಿರತೆಗೆ ಸಹಕಾರ ಸಂಘ ಸಹಕಾರಿ





**ಬೆಂಗಳೂರು** : ದೇಶದ ಆರ್ಥಿಕ ಸುಸ್ಥಿರತೆಗೆ ಸಹಕಾರ ಸಂಘಗಳ ಕೊಡುಗೆ ಅಪಾರವಾಗಿದೆ ಎಂದು ಶಾಸಕ ಎಲ್. ರವಿಸುಬ್ರಹ್ಮಣ್ಯ ಹೇಳಿದರು. ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಹಾಗೂ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ ಜಂಟಿಯಾಗಿ ಗುರುವಾರ ಎಪಿಎಸ್ ಕಾಲೇಜಿನಲ್ಲಿ ಹಮ್ಮಿಕೊಂಡ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಅಂಗವಾಗಿ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಐಸಿರಿ ಯೋಜನೆ, ಅಂತರ್ ಕಾಲೇಜು ರಸಪ್ರಶ್ನೆ ಹಾಗೂ ವಿದ್ಯಾರ್ಥಿಗಳಿಗೆ ಶೂನ್ಯ ಖಾತೆ ಅಭಿಯಾನ, ಅಭಿನಂದನೆ ಸಮಾರಂಭದಲ್ಲಿ ಅವರು ಮಾತನಾಡಿದರು. ಅಮೆರಿಕ ಸೇರಿದಂತೆ ಇನ್ನಿತರ ದೇಶವು ಆರ್ಥಿಕ ಹಿನ್ನಡೆಯನ್ನು ಕಾಣುತ್ತಿದ್ದು, ಇದರ ಮಧ್ಯ ಭಾರತವು ಆರ್ಥಿಕವಾಗಿ ಸ್ಥಿರವಾಗಿ ದಾಪುಗಾಲನ್ನು ಹಾಕುತ್ತಿದೆ. ಇದಕ್ಕೆ ಸಹಕಾರ ಸಂಘಗಳ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು.

ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಆರ್.ವೆಂಕಟೇಶ್ ಮಾತನಾಡಿ, ಬ್ಯಾಂಕ್ ವತಿಯಿಂದ ಸರ್ಕಾರಿ ಶಾಲೆಯ ವಿದ್ಯಾರ್ಥಿನಿಯರಿಗೆ ಐಸಿರಿ ಸಮೃದ್ಧಿ ಯೋಜನೆ ಅಡಿಯಲ್ಲಿ ಖಾತೆ ತೆರೆಯಲು ಅವಕಾಶ ಕಲ್ಪಿಸಲಾಗುತ್ತದೆ. ಈ ಖಾತೆಗೆ ಬ್ಯಾಂಕ್‌ನಿಂದ 500 ರೂ. ಮೊದಲಿಗೆ ನೀಡಲಾಗುತ್ತದೆ. ನಂತರ ಹೆತ್ತವರು ನಿರಂತರವಾಗಿ ಐದು ವರ್ಷಗಳ ಕಾಲ ಸಕ್ರಿಯವಾಗಿ ವಹಿವಾಟು ಮಾಡಿದರೆ ವಿದ್ಯಾರ್ಥಿನಿಯರ ಉನ್ನತ ವಿದ್ಯಾಭ್ಯಾಸ ಸಂದರ್ಭದಲ್ಲಿ 5 ಲಕ್ಷರೂ. ವರೆಗೆ ಸಾಲ ಒದಗಿಸಲಾಗುವುದು ಎಂದು ಹೇಳಿದರು.

ಹೊಸದಿಗಂತ ಸಮೂಹ ಸಂಪಾದಕ ವಿನಾಯಕ ಭಟ್ಟ ಮೂರೂರು ಮಾತನಾಡಿ ರಾಷ್ಟ್ರೀಯ ಬ್ಯಾಂಕ್‌ಗಳಲ್ಲಿ ಗ್ರಾಹಕರ ವಹಿವಾಟಿನ ಬಗ್ಗೆ ಮಾತನಾಡುತ್ತಾರೆ. ಆದರೆ, ಕೋ ಆಪರೇಟಿವ್‌ನಲ್ಲಿ ಮೊದಲಿಗೆ ಗ್ರಾಹಕರ ಆರ್ಥಿಕ ಸ್ಥಿತಿ, ಕಷ್ಟ ಸುಖವನ್ನು ಕೇಳುತ್ತಾರೆ. ಆ ಮೂಲಕ ಗ್ರಾಹಕರ ಹಾಗೂ ಕೋ ಆಪರೇಟಿವ್ ನಡುವೆ ಭಾವನಾತ್ಮಕ ಸಂಬಂಧವನ್ನು ಹೊಂದಿರುತ್ತಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಓಕಲ್ ಫಾರ್ ಲೋಕಲ್ ಎಂದು ಹೇಳುತ್ತಿರುತ್ತಾರೆ. ಸಹಕಾರ ಬ್ಯಾಂಕ್ ನಿಜವಾದ ಲೋಕಲ್, ಸ್ಥಳೀಯ ಜನರಿಗೆ ಹಲವು ಸೌಲಭ್ಯಗಳನ್ನು ಒದಗಿಸುತ್ತದೆ ಎಂದು ತಿಳಿಸಿದರು.

ಯುವಕರಿಗೆ ಬ್ಯಾಂಕ್ ಮೇಲೆ ಯಾವುದೇ ಸಂಬಂಧವಿರುವುದಿಲ್ಲ. ನಾಳೆ ಯಾರು ಹೆಚ್ಚು ಆಫರ್ ನೀಡುತ್ತದೆ ಆ ಬ್ಯಾಂಕ್‌ಗೆ ಹೋಗುತ್ತಾರೆ. ಐಸಿರಿ ಯೋಜನೆಯಡಿ ಖಾತೆ ತೆರೆದ ವಿದ್ಯಾರ್ಥಿಗಳು ಸುಮಾರು ವರ್ಷಗಳ ನಂತರವು ಬ್ಯಾಂಕ್‌ನೊಂದಿಗೆ ಸಂಬಂಧ ಬೆಳೆಸಲು ಬುನಾದಿಯಾಗಿರುತ್ತದೆ. ಜತೆಗೆ ಮಕ್ಕಳಲ್ಲಿ ಹೆಚ್ಚು ಹೆಚ್ಚು ಉಳಿತಾಯ ಮಾಡುವ ಮನೋಭಾವವನ್ನು ಮೂಡಿಸಲು ಸಹಕಾರಿಯಾಗಿದೆ ಎಂದು ಹೇಳಿದರು. ಈ ವೇಳೆ ಅಂತರ್ ಕಾಲೇಜು ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಸೊಸೈಟಿಗಳ ಅಧ್ಯಕ್ಷರನ್ನು ಅಭಿನಂದಿಸಲಾಯಿತು.

ಬ್ಯಾಂಕ್ ಪರೀಕ್ಷೆಗಳಲ್ಲಿ ಕೋ–ಆಪರೇಟಿವ್‌ನ ಡಿಪ್ಲೋಮಾ ಕೋರ್ಸ್‌ಗಳಲ್ಲಿ ಡಿಪ್ಲೋಮಾ ಮಾಡಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಬೇಕು. ಜೊತೆಗೆ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡುವ ಸಲುವಾಗಿ ಕಾಲೇಜಿನ ಪಠ್ಯದಲ್ಲಿ ಸಹಕಾರ ವಿಷಯವನ್ನು ಸೇರ್ಪಡೆ ಮಾಡಲು ರಾಜ್ಯ ಹಾಗೂ ಕೇಂದ್ರ ಸರ್ಕಾರ ಚಿಂತನೆ ನಡೆಸಬೇಕು ಎಂದು ಹೇಳಿದರು. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಪುಂಡಲೀಕ ಎನ್. ಕೇರೂರೆ, ಬಿಬಿಎಂಪಿ ಮಾಜಿ ಸದಸ್ಯ ಸಂಗಾತಿ ವೆಂಕಟೇಶ್, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ ಅಧ್ಯಕ್ಷ ಮಂಜುನಾಥ್ ಜೆ, ಲಿಡ್ಕರ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಡಾ. ವಸುಂದರಾ ಕೆ.ಎಂ. ಮುಂತಾದವರು ಉಪಸ್ಥಿತರಿದ್ದರು.

# ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಇತಿಹಾಸ ನಿರ್ಮಿಸಿದೆ : ಉಮಾಶ್ರೀ




**ಬೆಂಗಳೂರು :** ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಈ ಬಡಾವಣೆಯಲ್ಲಿ ಇತಿಹಾಸವನ್ನೇ ನಿರ್ಮಿಸಿದೆ ಎಂದು ಖ್ಯಾತ ಚಲನಚಿತ್ರ ನಟಿ ಹಾಗೂ ಮಾಜಿ ಮಂತ್ರಿಗಳಾದ ಡಾ. ಉಮಾಶ್ರೀ ಹೇಳಿದರು.

ದಿ ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಸದಸ್ಯರ ಮಕ್ಕಳಿಗೆ 2024–25ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದವರಿಗೆ ದಿನಾಂಕ: 16–11–2025 ಭಾನುವಾರ "ಉಭಯ ವೇದಾಂತ ಪ್ರವರ್ತನ" ಸಭಾ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ವಿತರಿಸಿ ಅವರು ಮಾತನಾಡಿದರು.

ದಿ ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕ್ ಒಂದು ಪ್ರತಿಷ್ಠಿತವಾದ ಬ್ಯಾಂಕ್ ಆಗಿದೆ. 100 ವರ್ಷಗಳನ್ನು ಆಚರಣೆ ಮಾಡೋದು. 100 ವರ್ಷಗಳ ಆಯುಷ್ಯವನ್ನು ಸಂಸ್ಥೆಗೆ ತಂದು ಕೊಡುವುದು ಅಷ್ಟು ಸುಲಭವಾದ ಕೆಲಸವಲ್ಲ. ಇಂತಹ ಅಸಾಧ್ಯವಾದ ಕೆಲಸವನ್ನು ಸಾಧ್ಯವಾಗಿಸಲು ಬಹಳಷ್ಟು ಜನ ನಿರ್ದೇಶಕರುಗಳು ಈ 100 ವರ್ಷಗಳಲ್ಲಿ ದುಡಿದಿರುವುದನ್ನು ನಾವು ಕಾಣಬಹುದು. 18000 ಜನ ಸದಸ್ಯರನ್ನು ಈ ಬ್ಯಾಂಕ್ ಹೊಂದಿದೆ. ಇದು ಸಾಗಿಬಂದ ಹಾದಿಯಲ್ಲಿ ಅದೆಷ್ಟು ಮಹನೀಯರು ಸದಸ್ಯರಾಗಿದ್ದವರು ಕಾಲವಶರಾಗಿದ್ದಾರೆ. ಅಧ್ಯಕ್ಷರಾಗಿದ್ದವರು, ಹಾಗೂ ಸದಸ್ಯರಾಗಿದ್ದವರ ಪ್ರಯತ್ನದ ಫಲವಾಗಿ ಈ ಬ್ಯಾಂಕ್ 105 ವರ್ಷಗಳನ್ನು ಸಂಪೂರ್ಣ ಮಾಡಿದೆ. ತುಂಬಾ ಹೆಮ್ಮೆಯ ಈ ಒಂದು ಬ್ಯಾಂಕ್ ಮಲ್ಲೇಶ್ವರಂ ಭಾಗದಲ್ಲಿ ಇತಿಹಾಸದಲ್ಲಿ ಉಳಿದುಕೊಂಡಿದೆ. ಬ್ಯಾಂಕ್ ಅಧ್ಯಕ್ಷರಾದ ಎನ್.ಎಂ.ಸುರೇಶ್ ರವರು ಅಧ್ಯಕ್ಷರಾದ ನಂತರ ಠೇವಣಿಗಳು ಹೆಚ್ಚಾಗಿದೆ ಹಾಗೂ ಬ್ಯಾಂಕ್ ಪಗ್ರತಿಯನ್ನು ಸಾಧಿಸುತ್ತಿದೆ. ನಮ್ಮ ಚಲನಚಿತ್ರ ಮಂಡಳಿಯ ಅಧ್ಯಕ್ಷರಾಗಿದ್ದಾಗ ಎನ್. ಎಂ.ಸುರೇಶ್ ರವರು ಯಾವ ರೀತಿಯಲ್ಲಿ ಉತ್ತಮ ಕೆಲಸಗಳನ್ನು ಮಾಡಿದ್ದಾರೋ ಅದೇ ರೀತಿ ಈ ಬ್ಯಾಂಕಿನಲ್ಲೂ ಕೂಡ ಎಲ್ಲಾ ನಿರ್ದೇಶಕರ ಸಹಕಾರದಿಂದ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ.

ಸುಮಾರು 780 ಕೋಟಿ ರೂಪಾಯಿ ಠೇವಣಿಯನ್ನು ಈ ಬ್ಯಾಂಕ್ ಹೊಂದಿದೆ ಹೆಮ್ಮೆಯಾಗುತ್ತದೆ. ಕನ್ನಡ ಕುಟುಂಬಗಳು ಇಂದು ಇಂಗ್ಲಿಷ್ ಮಯವಾಗುತ್ತಿರುವುದು ನಮ್ಮ ದೌರ್ಭಾಗ್ಯ ಮತ್ತು ದುರಂತ. ಇಂಗ್ಲೀಷ್ ಬದುಕಿಗೆ ಬೇಕಾದಂತಹ ಒಂದು ಉಪಸಾಧನ, ಮಕ್ಕಳ ಜೊತೆ ಮನೆಯಲ್ಲಿ ಕನ್ನಡದಲ್ಲಿ ವ್ಯವಹಾರ ಮಾಡಿ, ಎಲ್ಲಿ ಕುಟುಂಬದಲ್ಲಿ ಕನ್ನಡವನ್ನು ಉಳಿಸುವಂತಹ ಶಕ್ತಿ ಮತ್ತು ಸಾಮರ್ಥ್ಯ ನಿಮ್ಮಲ್ಲಿ ಇರುತ್ತವೆಯೋ, ಆ ಸಾಮರ್ಥ್ಯ ಮತ್ತು ಶಕ್ತಿಯನ್ನು ಬಳಸಿದಾಗ ಮಾತ್ರ ಮುಂದಿನ ಪೀಳಿಗೆ ಕನ್ನಡವನ್ನು ಉಳಿಸಲು ಸಾಧ್ಯ. 2500 ವರ್ಷಗಳ ಇತಿಹಾಸ ಕನ್ನಡ ಭಾಷೆಗೆ, ಕನ್ನಡ ಲಿಪಿಗೆ ಇದೆ. ಕನ್ನಡದ ಬಗ್ಗೆ ಹೆಮ್ಮೆ ಪಡಬೇಕು ಅದನ್ನು ಉಳಿಸಿ ಬೆಳೆಸಬೇಕು. ಮಕ್ಕಳು ಕನ್ನಡದ ರೂವಾರಿಗಳಾಗಬೇಕು ಎಂದು ಕಿವಿ ಮಾತನ್ನು ಹೇಳಿದರು.

ಮಕ್ಕಳ ಭವಿಷ್ಯ ಉಜ್ವಲವಾಗಲಿ, ಪ್ರತಿಭಾ ಪುರಸ್ಕಾರವನ್ನು ಸ್ವೀಕಾರ ಮಾಡಿದ ವಿದ್ಯಾರ್ಥಿಗಳು ತುಂಬಾ ಶ್ರಮಪಟ್ಟು ಸಾಧನೆಯನ್ನು ಮಾಡಿದ್ದಾರೆ. 83 ಮಕ್ಕಳಿಗೆ ಇಂದು ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಮಾಡಿದ್ದಾರೆ. ಹೆಣ್ಣುಮಕ್ಕಳಿಗೆ ಈಗಿನ ಕಾಲದಲ್ಲಿ ವಿದ್ಯೆ ಅತ್ಯಂತ ಮುಖ್ಯವಾದದ್ದು. ಸಾಧನೆ ಮಾಡಬೇಕಾದರೆ ವಿದ್ಯೆ ಎಷ್ಟು ಮುಖ್ಯವೋ, ಇತರ ಚಟುವಟಿಕೆಗಳಲ್ಲೂ ಮಕ್ಕಳು ತೊಡಗಿಸಿಕೊಳ್ಳಬೇಕು. ಕುಟುಂಬದಲ್ಲಿ ಹಿರಿಯರನ್ನು ಗೌರವಿಸಿ, ತಂದೆ ತಾಯಿಗಳನ್ನು ಗೌರವಿಸಿ ಅವರ ಕನಸುಗಳನ್ನು ಈಡೇರಿಸಿ, ಹಾಗೆಯೇ 105 ವರ್ಷಗಳನ್ನು ಪೂರೈಸಿದ ದಿ ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಶುಭವನ್ನು ಹಾರೈಸಿದರು.

ಈ ಸಂದರ್ಭದಲ್ಲಿ ದಿ ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧ್ಯಕ್ಷರಾದ ಎನ್.ಎಂ.ಸುರೇಶ್, ಉಪಾಧ್ಯಕ್ಷರಾದ ವೈ.ಎಸ್. ಕೇಶವರಾಜು ಹಾಗೂ ಎಲ್ಲಾ ನಿರ್ದೇಶಕರುಗಳು ಉಪಸ್ಥಿತರಿದ್ದರು.

---




## ನಿಮ್ಮ ಪ್ರಶ್ನೆ ನಮ್ಮ ಉತ್ತರ



**ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಆಡಳಿತ ಮಂಡಳಿಗೆ ಇತ್ತೀಚಿಗೆ ನಡೆದ ಚುನಾವಣೆ ನಂತರ ನಾವು ಹೊಸದಾಗಿ ಐದು ಸದಸ್ಯರಿರುವ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ನ್ನು ರಚಿಸಿದ್ದೇವೆ. ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ಸದಸ್ಯರ ಯಾದಿಯನ್ನು ರಿಜರ್ವ್ ಬ್ಯಾಂಕಿನ ಒಪ್ಪಿಗೆಗಾಗಿ ಸಲ್ಲಿಸಿದ್ದೇವೆ. ಒಂದು ತಿಂಗಳ ಮೇಲಾದರೂ ರಿಜರ್ವ್ ಬ್ಯಾಂಕಿನಿಂದ ಒಪ್ಪಿಗೆ ಬಂದಿಲ್ಲ. ಭಾರತೀಯ ರಿಜರ್ವ್ ಬ್ಯಾಂಕಿನಿಂದ ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ರಚನೆಗೆ ಒಪ್ಪಿಗೆ ಬರುವ ಮುನ್ನ ನಾವು ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ಸಭೆಯನ್ನು ಕರೆಯಬಹುದೇ? ಈ ಮಧ್ಯೆ ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ಒಂದು ಸಭೆಯನ್ನು ಕರೆಯಲಾಗಿದೆ. ಈ ಸಭೆ ನ್ಯಾಯ ಸಮ್ಮತವಾಗಿದೆಯೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಭಾರತೀಯ ರಿಜರ್ವ್ ಬ್ಯಾಂಕಿನ ದಿನಾಂಕ: ಡಿಸೆಂಬರ್ 31, 2019ರ ಸುತ್ತೋಲೆಯ ಅನುಬಂಧ ಮೂರರಲ್ಲಿ ತಿಳಿಸಿದಂತೆ ಕೇವಲ ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ಸದಸ್ಯರ ಯಾದಿಯನ್ನು ರಿಜರ್ವ್ ಬ್ಯಾಂಕಿನ ಅವಗಹನೆಗಾಗಿ ಸಲ್ಲಿಸಬೇಕಾಗಿದೆ. ಆದ್ದರಿಂದ, ಆಡಳಿತ ಮಂಡಳಿಯ ಠರಾವಿನ ಮೂಲಕ ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ರಚನೆಯಾದ ತಕ್ಷಣ, ಅದರ ಸಭೆಯನ್ನು ಕರೆದು ಕಾರ್ಯಾರಂಭ ಮಾಡಬಹುದು. ಆದ್ದರಿಂದ ಇತ್ತೀಚೆಗೆ ನಡೆದ ಸಭೆಯನ್ನು ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ಮೊದಲ ಸಭೆಯೆಂದು ಪರಿಗಣಿಸಿ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ವಿಜಯಪುರದಲ್ಲಿ ಡಿವೈಎಸ್‌ಪಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ ಬಸವರಾಜ್ ಯಲಿಗಾರ್, ತಮ್ಮ ಕೆಲಸದ ಒತ್ತಡದ ನಡುವೆಯೂ ಬಸವಣ್ಣನವರ ವಚನಗಳನ್ನು ಇಂಗ್ಲೀಷ್ ಭಾಷೆಗೆ ಅನುವಾದ ಮಾಡುತ್ತಿದ್ದಾರೆ. ಈಗ ಅವರು ಅಕ್ಕಮಹಾದೇವಿ ಅವರ ವಚನಗಳ ಅನುವಾದವನ್ನು ಮಾಡುತ್ತಿದ್ದಾರೆ.
- ಕೇಸರಿ ಕೃಷಿಯನ್ನು ಕಾಶ್ಮೀರದ ಗುಡ್ಡಗಾಡು ಅಥವಾ ಪರ್ವತ ಪ್ರದೇಶಗಳಲ್ಲಿ ಬೆಳೆಸಲಾಗುತ್ತದೆ. ಆದರೆ, ಬೆಂಗಳೂರು ಸೇರಿ ಶೃಂಗೇರಿ, ಕುಣಿಗಲ್ ಮತ್ತು ತುಮಕೂರಿನಲ್ಲಿ ಕೆಲ ಆಸಕ್ತರು ಒಳಾಂಗಣದಲ್ಲಿ ಕೇಸರಿ ಬೆಳೆಯುತ್ತಿದ್ದಾರೆ. ಕೇಸರಿ ಬೆಳೆಯಲು ಇಲ್ಲಿನ ಹವಾಮಾನವು ಅನುಕೂಲಕರವಾಗಿದೆ ಎಂದು ಕರ್ನಾಟಕ ಕೇಸರಿ ರೈತರ ಸಂಘದ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯದರ್ಶಿ ಲೋಕೇಶ್ ಪೊಲಿವಿನ್ ಹೇಳುತ್ತಾರೆ. ಪ್ರಸ್ತುತ, ಶುದ್ಧ ಕೇಸರಿಯನ್ನು ಪ್ರತಿ ಗ್ರಾಂಗೆ ಸುಮಾರು 2,000 ರೂ.ಗಳ ಬೆಲೆಗೆ ಇದೆ.
- ಜಮ್ಮು ಮತ್ತು ಕಾಶ್ಮೀರ ಆಡಳಿತವು ಪತ್ರಕರ್ತ ಅರ್ಫಾಜ್ ಅಹ್ಮದ್ ಡೇಯಿಂಗ್ ಅವರು ಮಾಡಿದ ವರದಿಗೆ ಪ್ರತೀಕಾರವಾಗಿ ಅವರ ಮನೆಯನ್ನು ಅಧಿಕಾರಿಗಳು ನೆಲಸಮ ಮಾಡಿದೆ. ಇದನ್ನು ನೋಡಿ ಮನಕರಗಿದ ಕುಲದೀಪ್ ಶರ್ಮಾ ಎನ್ನುವವರು ತಮ್ಮ ಐದು ನಿವೇಶನಗಳನ್ನು ಅವರಿಗೆ ಉಡುಗೊರೆಯಾಗಿ ನೀಡಿದ್ದಾರೆ.
- ಶ್ರೀಲಂಕಾದಾದ್ಯಂತ ದಿಟ್ವಾ ಚಂಡಮಾರುತದಿಂದ ಉಂಟಾದ ಧಾರಾಕಾರ ಮಳೆ ಮತ್ತು ಪ್ರವಾಹದಿಂದಾಗಿ ಇದುವರೆಗೆ 123 ಜನರು ಸಾವನ್ನಪ್ಪಿದ್ದರೆ, 130 ಜನರು ಕಾಣೆಯಾಗಿದ್ದಾರೆ ಎಂದು ವಿಪತ್ತು ನಿರ್ವಹಣಾ ಕೇಂದ್ರ ತಿಳಿಸಿದೆ. ಒಂದು ವಾರದಿಂದ ಸುರಿಯುತ್ತಿರುವ ಭಾರೀ ಮಳೆಯಲ್ಲಿ ಮನೆಗಳು ನಾಶವಾದ ನಂತರ ಪರಿಹಾರ ಕಾರ್ಯಾಚರಣೆಗಳು ನಡೆಯುತ್ತಿವೆ.
- ಮುಜಾಫರ್ ನಗರದಲ್ಲಿ ನಡೆದ ವಿವಾಹದಲ್ಲಿ ವರ ಅವಧೇಶ್ ತನಗೆ ವರದಕ್ಷಿಣೆಯಯಾಗಿ ತನ್ನ ಭಾವಿ ಪತ್ನಿ ಅದಿತಿಯ ಪೋಷಕರು ನೀಡಿದ್ದ 31 ಲಕ್ಷ ರೂಪಾಯಿಗಳನ್ನು ನಿರಾಕರಿಸಿ, ಸಂಪ್ರದಾಯದ ಭಾಗವಾಗಿ ಕೇವಲ 1 ರೂಪಾಯಿ ಪಡೆದಿದ್ದಾರೆ.

## ಓದುಗರ ಅನಿಸಿಕೆ...



**ಸೂಕ್ತ ಪುರಸ್ಕಾರವಾಗಿದೆ :** ಹಾವೇರಿಯಲ್ಲಿ ಜರುಗಿದ ಅಖಿಲ ಭಾರತ ಸಹಕಾರ ಸಪ್ತಾಹ ದಿನಾಚರಣೆಯಲ್ಲಿ ನಮ್ಮ ಭಾಗದ ಅತಿ ಹೆಚ್ಚು ದುಡಿಯುವ ಬಂಡವಾಳ ಹೊಂದಿರುವ ಬ್ಯಾಂಕುಗಳಿಗೆ ಹಾಗೂ ಅತೀ ಹೆಚ್ಚು ನಿವ್ವಳ ಲಾಭ ಗಳಿಸಿರುವ ಬ್ಯಾಂಕುಗಳಿಗೆ ಉತ್ತಮ ಸಹಕಾರ ಬ್ಯಾಂಕುಗಳೆಂದು ಮಹಾಮಂಡಳದವತಿಯಿಂದ ಪ್ರಶಸ್ತಿ ನೀಡಿ ಗೌರವಿಸಿರುವುದು ಆ ಬ್ಯಾಂಕುಗಳು ಸಾಧಿಸಿರುವ ಸಾಧನೆಗೆ ಸೂಕ್ತ ಪುರಸ್ಕಾರವಾಗಿದೆ.

**▸▸ ಸುಜಾತ ಪಾಟೀಲ, ಬಾಗೇವಾಡಿ**

**ಸ್ವಚ್ಛತೆಯ ಅಗತ್ಯ :** ಮಂಗಳೂರಿನ ವಿಶ್ವಕರ್ಮ ಸಹಕಾರ ಬ್ಯಾಂಕ್ ಸ್ವಚ್ಛತಾ ಕಾರ್ಯಕ್ರಮ ನಡೆಸಿದ್ದು ತಿಳಿದು ಸಂತೋಷವಾಯಿತು. ಸ್ವಚ್ಛತೆ ಎನ್ನುವುದು ಮಹಾತ್ಮಾ ಗಾಂಧೀಜಿಯವರು ನಮಗೆ ನೀಡಿದ ಸಂದೇಶವಾಗಿದೆ. ಆದರೆ, ಇಂದು ಜೀವನದ ಎಲ್ಲ ಕ್ಷೇತ್ರಗಳಲ್ಲೂ ಸ್ವಚ್ಛತೆಯ ಅಗತ್ಯವಿದೆ. ಪರಿಸರ ಮಾತ್ರವಲ್ಲ, ನಮ್ಮ ನಡೆ-ನುಡಿ, ನಿತ್ಯ ವ್ಯವಹಾರದಲ್ಲಿಯೂ ಸ್ವಚ್ಛವಾಗಿರುವಂತೆ ಇರಬೇಕಾದ್ದು ಕೂಡಾ ಅಷ್ಟೇ ಮುಖ್ಯವಾಗಿದೆ.

**▸▸ ಚಿದಾನಂದ ಕೆ.ಎಂ., ಚಿತ್ರದುರ್ಗ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.